doc-50
TIP-2

Regd No M 1229

43rd Year | Sri 'Satyavadi' Mysore

8—5—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಅಣೆ

ಸತ್ಯವಾದಿ

ಸ್ಥಾಪಕರು— ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರತ್ನಯ್ಯರು [ಬಿಡಿ ಪ್ರತಿ 3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಭಾರತಕೆ ಗೋಧಿ ಬಳುವಳಿ
ರ

ನವದೆಹಲಿ 7— ಕೆನಡಾವು ಭಾರತಕ್ಕೆ ಸುಮಾರು 1-5 ಲಕ್ಷ ಟನ್‌ಗಳಷ್ಟು ಗೋಧಿಯನ್ನು ಬಳುವಳಿಯಾಗಿ ಕೊಡಲೊಪ್ಪಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು — ಈ ಗೋಧಿಯ ಮೌಲ್ಯವು ಸುಮಾರು 100 ಲಕ್ಷ ಡಾಲರುಗಳಷ್ಟೆಂದು ನಿರೀಕ್ಷಿಸಲಾಗಿದೆಯೆಂದೂ ತಿಳಿಸಲಾಯಿತು.

ಲಂಡನ್ 6— ಪರಿಣಾಮಕಾರಿ ಮತ್ತು ನವೀನ 160 ವರ್ಣಚಿತ್ರಗಳು ಸಾಥೇಸ್ ಹರಾಜು ಅಂಗಡಿಯಲ್ಲಿ 400000 ಲಕ್ಷ ಪೌಂಡುಗಳನ್ನು ದೊರಕಿಸಿದವು — 1905 ರ ಪಿಕಾಸೋರವರ ' ಸುಂದರಿಯ ನಗ್ನ ಚಿತ್ರ ' 55000 ಪೌಂಡುಗಳನ್ನು ದೊರಕಿಸಿತು !

ದುರ್ನಡತೆಗಾಗಿ ಬಂಧನ

ಅಮೃತಸರ 7 — ಹುಡುಗಿಯರ ಸಂಸ್ಥೆ ಮುಂದೆ ದುರ್ನಡತೆ ತ ಲು 60 ಮಂದಿಯನ್ನು ಪೋಲೀಸರು ಬಂಧಿಸಿದರು. ಅವರಲ್ಲಿ 6 ಜನ ಳ್ಳೆ ನಡತೆಗೆ ಜಾಮೀನು ಕೊಟ್ಟರು. ಳಿದವರ ವಿಚಾರಣೆ ಆಗುವದು

ಭಿನಂದನೆ ಸಭೆ

ಈ ತಿಂಗಳು 11 ನೇ ತಾ|| ಸಂಜೆ 6 ಗಂಟೆಗೆ ಮೈಸೂರು ಪುರಸಭಾಧ್ಯ ನೇತೃತ್ವದಲ್ಲಿ ಪುರಭವನ ಮೈದಾ 132 ಗಂಟೆ ಸೈಕಲ್ ಪ್ರದರ್ಶನ ಡಿದ ಶ್ರೀ ವಿಜಯಕುಮಾರರನ್ನು ಅ ತಿಸುವ ಸಮಾರಂಭವೇರ್ಪಾಟಾ

ನಿಖಿಗೆ ಸೂಚನೆ

ಕರಾಚಿ 6 — ಪೂರ್ವ ಪಾಕಿಸ್ತಾನ ಮಾಜಿ ಮಂತ್ರಿಗಳು, ಮಾಜಿ ವಿ ಸ ಸಭೆ ಸದಸ್ಯರ ದುರಾಡಳಿತ ಬಗ್ಗೆ ನಡೆಸಲು ಅಜ್ಞೆ ಆಗಿದೆ

೦ರ 13 ರ ವರೆಗೆ ಹೈದ ನಿನಲ್ಲಿ ಅಖಿಲ ಭಾರತ ಸಣ್ಣ ಕೈ 3 ನೆಯ ಸಭೆ ಸಮಾವೇಶ ದಲ್ಲಿ

ಪಿತೂರಿ ಪತ್ತೆ

ಲಿಸ್ಬನ್ 7 — ಆಡಳಿತ ವಿರುದ್ಧ ನಡೆದ ಪಿತೂರಿಯನ್ನು ಪತ್ತೆ ಮಾಡಲಾಯಿತೆಂದೂ ಈ ಸಂದರ್ಭದಲ್ಲಿ 9 ಅಧಿಕಾರಿಗಳು 22 ಮಂದಿ ಇತರರುಗಳನ್ನು ಬಂಧಿಸಲಾಗಿದೆ ಎಂದೂ ಆ ಪೈಕಿ ಕೆಲವರು ಕಮ್ಯುನಿಸ್ಟರೆಂದೂ ಪೋರ್ಚುಗಲ್ ಪ್ರಕಟಿಸಿದೆ

ಹೊಸ ಅಧ್ಯಕ್ಷರು

ಬೆಂಗಳೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ವಿಧಾನಸಭೆ ಸದಸ್ಯ ಶ್ರೀ ವಿ ಪಿ ದೀನದಯಾಳು ನಾಯ್ಡುರವರ ನೇಮಕವಾಗಿದೆ

ಬಿಕ್ಕಟ್ಟು

ಕೊಲಂಬೊ 7 — 3 ವರ್ಷಗಳಿಂದ ಸಿಂಹಳದ ಆಡಳಿತ ನಡೆಸುತ್ತಿರುವ ಸಾಲಮನ್ ಬಂಡಾರನಾಯಕೆ ಮಂತ್ರಿಮಂಡಲದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿದೆ

ರಷ್ಯದ ಆರೋಪ

ಜಿನೀವಾ 6 — ಅಣು ಪ್ರಯೋಗ ಕೊನೆ ಮಾಡುವ ಕುರಿತು ಮಾತುಕತೆ ನಡೆಯುವ ಬಗ್ಗೆ ಪಶ್ಚಿಮ ರಾಜ್ಯಗಳು ನಿಧಾನ ತಂತ್ರ ಮಾಡುತ್ತಿದೆ ಎಂದು ರಷ್ಯ ಆರೋಪಿಸಿದೆ

ವಿವಿಧ ವರ್ತಮಾನ

ವೊಲ್ವರ್‌ಹಾಂಟನ್ 7 — ಇಲ್ಲಿನ ನ್ಯೂ ಕ್ರಾಸ್ ಆಸ್ಪತ್ರೆ ಬಳಿ ಕ್ರೀಡಾಂಗಣದಲ್ಲಿ ಫೆಬ್ರವರಿ 12 ನೆಯ ತಾ||ನಂದು 5 ಮಕ್ಕಳ ತಾಯಿ ಮಾರ್ಗರ್ ಗ್ರೈಲ್ಸಳು ಇರಿತದಿಂದ ಕೊಲೆ ಆದುದು ಪತ್ತೆ ಆಗಿ ಈ ಕೊಲೆ ಸಂಬಂಧದಲ್ಲಿ 31 ವಯಸ್ಸಿನ ಭಾರತೀಯ ವೈದ್ಯ ಡಾ|| ರವೀಂದ್ರನಾಥ ಶ್ರೀನಿವಾಸ ಭಾಸ್ಕೆ ಎಂಬವನ ಮೇಲೆ ಆರೋಪ ಮಾಡಿದ್ದರು. ನಿನ್ನೆ ಆರೋಪಿಯು ನ್ಯಾಯಾಲಯದಲ್ಲಿ ಹೇಳಿಕೆಯನ್ನಿತ್ತು, 45 ವಯಸ್ಸಿನ ಆ ನರ್ಸಳನ್ನು ಚುಂಬಿಸಿದೆನೆ ವಿನಃ ಕೊಲೆ ಮಾಡಲಿಲ್ಲ ಎಂದು ತಿಳಿಸಿರುವನು

ನವ ದೆಹಲಿ 7 — ಲೋಕಸಭೆಯಲ್ಲಿ ಕಾಂಗ್ರೆಸ್ಸಿನ ರಾಣಿ ಮಂಜುಳಾದೇವಿ ಮಾತನಾಡುತ್ತಾ, ಟಿಬೆಟ್ಟಿನ ಗುರುಕುಲಗಳಲ್ಲಿ ಬೆಲೆ ಬಾಳುವ ಸಂಸ್ಕೃತ ಹಸ್ತಪ್ರತಿಗಳಿವೆ, ಅವುಗಳನ್ನು ರಕ್ಷಿಸುವಂತೆ ಚೀಣಾ ಸರ್ಕಾರವನ್ನು ಕೇಳಬೇಕು ಎಂದರು.

ನವ ದೆಹಲಿ 7 — ಕದಲಿಸಲ್ಪಟ್ಟ ಜನರು ಬಾಡಿಗೆಮುಂತಾದುವನ್ನು ಬಾಕಿ ಉಳಿಸಿಕೊಂಡರೆ ಅವರನ್ನು ಬಂಧಿಸುವ ಮಸೂದೆ ರಾಜ್ಯಸಭೆಯಲ್ಲಿ ಅಂಗೀಕೃತವಾಯಿತು.

ಬರ್ನ್ 6 — ಗ್ಯಾಸ್ಟ್ರಮನಿ ಮತ್ತು ಮ್ಯೂನಿಚ್ ಟೂರಿಸಂನ ಅಂತರ ರಾಷ್ಟ್ರ ವಸ್ತುಪ್ರದರ್ಶನದ ಭಾರತ ಪವಲಿಯನ್‌ಗೆ ಭಂಗಾರದ ಪದಕ ದೊರೆತಿದೆ.

ಆಂಧ್ರಪ್ರದೇಶದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯವಾಡಾದಲ್ಲಿ ಹಾಲಿನಪುಡಿ ಕಾರ್ಖಾನೆ ಆರಂಭಿಸುವ ಅಂಶವಿದೆ.

ನವ ದೆಹಲಿ 6 — 1958 ರ ಸಕ್ಕರೆ ರಫ್ತು ಅಭಿವೃದ್ಧಿ ಕಾನೂನು ಕ್ರಮಬದ್ಧವೆಂದು ಸುಪ್ರೀಂ ಕೋರ್ಟು ತೀರ್ಪಿತ್ತಿರುವದು.

ಆಗ್ರ 6 — ಸ್ಕ್ವಾಡ್ರನ್ ಲೀಡರ್ ಶ್ರೀ ಕಾಮತರ ಮೂರು ವರ್ಷದ ಮಗಳ ದೇಹವನ್ನು ಕಳೆದ ರಾತ್ರಿ ಎರಡು ನಾಯಿಗಳ ಸಹಾಯದಿಂದ ಪೋಲೀಸರು ಪತ್ತೆಹಚ್ಚಿದರು. ಅಡಿಗೆ ಮನೆ ಚಾಕುವಿನಿಂದ ಮಗುವಿನ ಕೊರಳು ಕೊಯ್ದು ಕಾಮತರ ಮನೆಯ ಕಾಂಪೌಂಡಿನಲ್ಲಿ ಹೂಳಿದ್ದುದು ಪತ್ತೆ ಆಯಿತು. ಮಗುವಿನ ಕೆಲವು ಪದಾರ್ಥಗಳ ವಾಸನೆ ಅರಿವಿನ ಮೂಲಕ ನಾಯಿಗಳು ದೇಹ ಪತ್ತೆ ಮಾಡಲು ತೆರಳಿದವು. ಮಗು ಮತ್ತು ಅದರ ತಾಯಿಯ ಕೊಲೆಯಲ್ಲಿ ಓರ್ವರಿಗಿಂತ ಹೆಚ್ಚು ಜನರು ಇರುವರೆಂದು ಪೋಲೀಸರು ನಂಬಿರುವರು.

ಮುಜಫರಪುರ 6 — ಅಪರಾಧಿಗಳನ್ನು ಸಮಾಜದಲ್ಲಿ ಸರಿಯಾಗಿ ಬಾಳುವಂತೆ ವ್ಯವಸ್ಥೆ ಮಾಡಲು ಇಲ್ಲಿನ ಪ್ರಧಾನ ಬಂದೀಖಾನೆಯಲ್ಲಿ ಸುಧಾರಣೆ ಕ್ರಮ ಜಾರಿಗೆ ಬಂದಿದೆ.

ಕಲ್ಕತ್ತಾ 7 — ಅಮೇರಿಕಾ ವಿಮಾನವೊಂದರಲ್ಲಿ ತೆರಳುತ್ತಿದ್ದ ಆಸ್ಟ್ರಿಯಾ ರಾಷ್ಟ್ರೀಯನೊಬ್ಬನಿಂದ ರೂ. 5 5ಲಕ್ಷ ಮೊತ್ತದ ಅಕ್ರಮ ಸಾಗಾಣಿಕೆ ವಜ್ರವನ್ನು ಪೋಲೀಸರು ವಶಮಾಡಿಕೊಂಡಿರುವರು

ಕೈರೊ 6 — ದಕ್ಷಿಣ ಆಫ್ರಿಕಾ ಸರ್ಕಾರವನ್ನು ಬೆಂಬಲಿಸುವ ಸಂಸ್ಥೆಗಳಿಂದ ಬರುವ ಪದಾರ್ಥಗಳನ್ನು ಬಹಿಷ್ಕರಿಸುವಂತೆ ಏಷ್ಯ-ಆಫ್ರೋ ರಾಜ್ಯಗಳ ಸಂಘಟನಾ ಸಮಿತಿ ಕರೆ ಇತ್ತಿದೆ.

ಜೈಪುರ 6 — ಅಂತ್ಯಕ್ರಿಯೆ ಹಬ್ಬ ನಿರೋಧ ಮಸೂದೆಯನ್ನು ರಾಜಸ್ಥಾನ ವಿಧಾನ ಸಭೆ ಪರಿಶೀಲನಾ ಸಮಿತಿಗೆ ಕಳಿಸಿತು.

ಪಾಲಿಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

9 ದ್ವಿತೀಯ ಕೃತಿಕ

ವಿವಿಧ ವಿಷಯಗಳು

ನವದೆಹಲಿ 7— ನಮ್ಮ ದೇಶದಲ್ಲಿಯೇ ಮಕ್ಕಳ ಆಹಾರ ವಸ್ತುಗಳನ್ನು ತಯಾರಿಸುವುದಕ್ಕಾಗಿ ನಾಲ್ಕು ಸಂಸ್ಥೆಗಳಿಗೆ ಅನುಮತಿ ಕೊಡಲಾಗಿದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು ; ಪ್ರತಿವರ್ಷವೂ ಈ ಕಾರ್ಖಾನೆಗಳು ಸುಮಾರು 4500 ಟನ್ ಗಳಷ್ಟು ಶಿಶುಕ್ಷೀರ ಆಹಾರವಸ್ತುಗಳನ್ನು ಉತ್ಪಾದಿಸುವ ನಿರೀಕ್ಷೆ ಇದೆ ಎಂದೂ ತಿಳಿಸಲಾಯಿತು.

○ ○ ○ ○

ನವದೆಹಲಿ 7— ಆಂಧ್ರಪ್ರದೇಶ, ಅಸ್ಸಾಂ, ಬಿಹಾರು, ಮುಂಬೈ, ಕೇರಳ, ಮಧ್ಯಪ್ರದೇ, ಮೈಸೂರು, ಒರಿಸ್ಸಾ, ಪಂಜಾಬು, ರಾಜಸ್ಥಾನ ಮತ್ತು ಉತ್ತರ ಪ್ರದೇಶ ಈ ರಾಜ್ಯ ಸರಕಾರಗಳಿಂದ ತೃತೀಯ ಯೋಜನೆಯಲ್ಲಿ ಕಡ್ಡಾಯ ಶಿಕ್ಷಣ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಅಂದಾಜುಗಳು ಬಂದಿವೆಯೆಂದೂ, ಭಾರತ ಸರಕಾರದ ಅಂದಾಜಿನ ಪ್ರಕಾರ ಇದಕ್ಕೆ ಒಟ್ಟು 300 ಕೋಟಿ ರೂಗಳು ಬೇಕಾಗುವುದೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

○ ○ ○ ○

ನ್ಯೂಯಾರ್ಕ್ 4— ಇಲ್ಲಿ ಪ್ರಾಡಕ್ಟ್ಸ್ ಆಫ್ ಇಂಡಿಯಾ ಎಂಬ ಕಾರ್ಪೋರೇಷನನ್ನು ರಚಿಸಲಾಗಿದೆ ಎಂದು ಕಾರ್ಪೋರೇಷನ್ನಿನ ಅಧ್ಯಕ್ಷ ಆಸ್ಟಿನ್ ಗ್ರೀವ್ಸ್ ತಿಳಿಸುತ್ತಾರೆ —ನ್ಯೂಯಾರ್ಕ್ ವರ್ಲ್ಡ್ ಟೆಲಿಗ್ರಾಂನಲ್ಲಿ ವರದಿಯಾದಂತೆ, ಈ ಹೊಸ ಫರ್ಮು ಭಾರತದಿಂದ ಸುಂದರವಾದ ಹ್ಯಾಂಡುಬ್ಯಾಗುಗಳನ್ನು, ಅಂಗವಸ್ತ್ರಗಳನ್ನು, ಪಾದರಕ್ಷೆಗಳನ್ನು, ವಜ್ರಾಭರಣಗಳನ್ನು ಮತ್ತು ಇತರ ಉತ್ತಮವಾದ ಹಸ್ತಕೌಶಲ್ಯದ ಸರಕುಗಳನ್ನು ಆಮದು ಮಾಡಲಾಗುವುದು.

○ ○ ○ ○

ಸಮುದ್ರದ ಜಲದಿಂದ ಉಪ್ಪನ್ನೂ, ಇತರ ಅಗತ್ಯ ಲೋಹಗಳನ್ನು ಪ್ರತ್ಯೇಕಿಸಬಲ್ಲ ಹೊಸ ಪ್ರಯೋಗಶಾಲೆಯ ಸಾಧನವನ್ನು ಕುರಿತ ವಿವರಣೆ ಚಿಕಾಗೋವಿನ ಅಮೇರಿಕಾದ ರಸಾಯನಿಕ ಸಂಘದ ಇತ್ತೀಚಿನ ಸಭೆಯೊಂದರಲ್ಲಿ ಕೇಳಿಬಂತು : ಈ ಸಾಧನದಿಂದ ಸೋಂಕು ರೋಗಗಳ ವಿರುದ್ಧ ಅನೇಕ ಮುಖ್ಯವಾದ ವ್ಯಾಕ್ಸೀನ್ ಒಂದನ್ನು ಸಿದ್ಧಪಡಿಸಲು ಸಾಧ್ಯವಾಗಬಹುದು.

ದಿವ್ಯವಾಣಿ

ಮನುಷ್ಯನು ತನ್ನಿಂದ ಸಾಧ್ಯವಾದ ಯತ್ನವನ್ನು ಮಾಡದಿದ್ದರೆ ಅಂತಹ ಮಾನವ ಯತ್ನದ ಸಹಕಾರವಿಲ್ಲದ ದೈವವು ಆವೊಂದು ಕಾರ್ಯವನ್ನೂ ಪೂರೈಸುವಂತಿಲ್ಲ ! ಅಂತೆಯೇ ದೈವದ ಬೆಂಬಲವಿಲ್ಲದ ಬರೇ ಮನುಷ್ಯ ಯತ್ನವೂ ಯಾವೊಂದು ಅಭೀಷ್ಟಫಲವನ್ನೂ ಪೂರೈಸಿಕೊಡುವಂತಿಲ್ಲ.

SHAKTI
SUDHA

A Superb Tonic

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

Both for the child and the mother ...

Here is a rich, palatable, nutritive, vitamin-fortified food that children will love and thrive on! For nursing and expectant mothers too, this is ideal!

EXTRACT of MALT with COD LIVER OIL

TRADE MARK

THE MYSORE INDUSTRIAL & TESTING LABORATORY LTD. BANGALORE-3.
Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—
71 / 4 Arcot Sreenivasachar St., Bangalore 2.

ಅಪ್ಸರಾ— 3–5–59 ರಿಂದ

ಪಿಳ್ಳೈಕನಿಯಮುದು ತಮಿಳು

ನಟವರ್ಗ— ರಾಜೇಂದ್ರನ್, ವೀರಪ್ಪ, ಇ ವಿ ಸರೋಜ ಎಂ ಎನ್ ರಾಜಮ್
ಮತ್ತು ಲಕ್ಷ್ಮಿ, ಅಂಗಮುತ್ತು,
ಪ್ರತಿದಿನ 3 ಆಟಗಳು



ವುಡ್‌ಲ್ಯಾಂಡ್ಸ್

6 th Popular Week

ಅನಾಡಿ
(ಹಿಂದಿ)

ತಾರಾಗಣ- ನೂತನ್, ರಾಜ್ ಕಪೂರ್
ಮೋತೀಲಾಲ್, ಶುಭಾ ಕೋಟೆ
ಒಮ್ಮೆ ನೋಡಿದರೆ ಮತ್ತೊಮ್ಮೆ ನೋ
ಬೇಕೆನ್ನಿಸುವ ಚಿತ್ರ

Sri "SATYAVADI" Dail

Oldest Newspaper in the State ; Splendid Advert

Advertisement Tariff

Casual	Rs 1-50 per inch
Contract above 100 inches	1-00
500	0-75

Column length 12½ inches ; width 2 inches; 4 col to a pa
The decision of the management is final
Manager "Satyavadi", Chamarajpuram, My

Edited, Printed & Published by Dharma Prachara Nirata
Krishna Rao, at the Satyavadi Press Chamarajapuram, My